ಕರ್ನಾಟಕ ಸರ್ಕಾರ

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

File No: DTE-ADMI0ACM2/26/2020

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ:08-10-2020.

**- :: ಸು ತ್ತೋ ಲೆ ::-**

**ವಿಷಯ:** 2020-21ನೇ ಸಾಲಿನ ಡಿಪ್ಲೋಮಾ ವ್ಯಾಸಂಗಗಳಿಗೆ ವಿದ್ಯಾರ್ಥಿಗಳ ಪ್ರವೇಶ ಹಾಗೂ ವಿದ್ಯಾರ್ಥಿಗಳ ವರ್ಗಾವಣೆ ಬಗ್ಗೆ (ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್‌ಗಳಿಗೆ ಸಂಬಂಧಿಸಿದಂತೆ) ಅನುಸರಿಸಬೇಕಾದ ಕ್ರಮಗಳ ಕುರಿತು.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಇಡಿ 222 ಟಿಪಿಇ 2012, ದಿ:17/09/2012.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 99 ಟಿಪಿಇ 01, ದಿ:04/03/2009.
3. ಸರ್ಕಾರದ ಆದೇಶ ಸಂಖ್ಯೆ: ಇಡಿ 11 ಟಿಪಿಇ 07, ದಿ:03/12/2007.
4. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರ ಅಧಿಕೃತ ಜ್ಞಾಪನ ಸಂ. ಬಿಟಿಇ/11/ಇಎಸಿಎಸ್(2)/2019-20, ದಿ:13-07-2020.

-0000000-

2020-21ನೇ ಸಾಲಿನಲ್ಲಿ ತೃತೀಯ ಸೆಮಿಸ್ಟರ್ ಮತ್ತು ಐದನೇ ಸೆಮಿಸ್ಟರ್ ಡಿಪ್ಲೋಮಾ ಅಭ್ಯರ್ಥಿಗಳ ಪ್ರವೇಶ, ವಿದ್ಯಾರ್ಥಿಗಳ ವರ್ಗಾವಣೆ ಮತ್ತು ಪ್ರಥಮ, ತೃತೀಯ ಮತ್ತು ಅಂತಿಮ ಸೆಮಿಸ್ಟರ್ ಡಿಪ್ಲೋಮಾ ಕೋರ್ಸ್‌ಗಳಿಗೆ ರಿಪೀಟರ್ ಆಗಿ ಪ್ರವೇಶ ನೀಡುವ ಸಂಬಂಧದಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಯನ್ನು ಕೆಳಗೆ ನಮೂದಿಸಲಾಗಿದೆ.

| | | |
|---|---|---|
| 1. | ತೃತೀಯ ಸೆಮಿಸ್ಟರ್ ಹಾಗೂ ಐದನೇ ಸೆಮಿಸ್ಟರ್ ಡಿಪ್ಲೋಮಾ ಅಭ್ಯರ್ಥಿಗಳ ಪ್ರವೇಶದ ಅಂತಿಮ ದಿನಾಂಕ<br><br>**ಸೂಚನೆ:-**ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕಗಳನ್ನು ಕಡ್ಡಾಯವಾಗಿ ಪ್ರವೇಶ ಶುಲ್ಕದ ಜೊತೆಗೆ ಪಾವತಿ ಮಾಡತಕ್ಕದ್ದು. | 1. ದಿನಾಂಕ: **15-10-2020** ರ ಒಳಗೆ ಯಾವುದೇ ದಂಡ ಶುಲ್ಕವಿಲ್ಲದೆ ಪ್ರವೇಶ ನೀಡಬಹುದಾಗಿದೆ.<br>2. ದಿನಾಂಕ: **23-10-2020** ರ ಒಳಗೆ ₹ 200/- ದಂಡ ಶುಲ್ಕದೊಂದಿಗೆ ಪ್ರವೇಶ ನೀಡುವುದು.<br>3. ದಿನಾಂಕ: **02-11-2020** ರ ಒಳಗೆ ₹ 400/- ದಂಡ ಶುಲ್ಕದೊಂದಿಗೆ ಪ್ರವೇಶ ನೀಡುವುದು.<br><br>ಅಂತಿಮವಾಗಿ ದಿನಾಂಕ: **07-11-2020** ರವರೆಗೆ ₹ 1,000/- ದಂಡ ಶುಲ್ಕದೊಂದಿಗೆ ಪ್ರವೇಶ ನೀಡುವುದು. |
| 2. | ಪ್ರಥಮ ಸೆಮಿಸ್ಟರ್, ತೃತೀಯ ಸೆಮಿಸ್ಟರ್ ಮತ್ತು ಅಂತಿಮ ಸೆಮಿಸ್ಟರ್ ಡಿಪ್ಲೋಮಾ ವ್ಯಾಸಂಗಗಳಿಗೆ ಸೇರ ಬಯಸುವ ರಿಪೀಟರ್ ಅಭ್ಯರ್ಥಿಗಳ ಪ್ರವೇಶದ ಅಂತಿಮ ದಿನಾಂಕ | ರಿಪೀಟರ್ ಪ್ರವೇಶವನ್ನು ರಿಪೀಟರ್ ಕೋಟಾದ ಪ್ರವೇಶ ನಿಯಮಗಳ ಪ್ರಕಾರ ಶೇ. 10ರ ಮಿತಿಯಲ್ಲಿ ಆಯಾ ಕೋರ್ಸಿಗೆ ದಿನಾಂಕ: **15-10-2020** ರ ಒಳಗೆ ಪ್ರವೇಶ ನೀಡುವುದು.<br>1. ದಿನಾಂಕ: **23-10-2020** ರ ಒಳಗೆ ₹ 200/- ದಂಡ ಶುಲ್ಕದೊಂದಿಗೆ ಪ್ರವೇಶ ನೀಡುವುದು.<br>2. ದಿನಾಂಕ: **02-11-2020** ರ ಒಳಗೆ ₹ 400/- ದಂಡ ಶುಲ್ಕದೊಂದಿಗೆ ಪ್ರವೇಶ ನೀಡುವುದು.<br><br>ಅಂತಿಮವಾಗಿ ದಿನಾಂಕ: **07-11-2020** ರವರೆಗೆ ₹ 1,000/- ದಂಡ ಶುಲ್ಕದೊಂದಿಗೆ ಪ್ರವೇಶ ನೀಡುವುದು.<br><br>ರಿಪೀಟರ್ ಪ್ರವೇಶದಲ್ಲಿ ಯಾವುದೇ ಕೋರ್ಸ್ ಬದಲಾವಣೆಗೆ ಅವಕಾಶವಿರುವುದಿಲ್ಲ. ರಿಪೀಟರ್ ಆಗಿ ಒಬ್ಬ ವಿದ್ಯಾರ್ಥಿಗೆ ಒಂದು ಸಾರಿ |

| | | |
|---|---|---|
| | | ಮಾತ್ರ ಹಾಗೂ ವಿದ್ಯಾರ್ಥಿಯು ಮೊದಲು ಪ್ರವೇಶ ಪಡೆದ ವರ್ಷದಿಂದ **ಮೂರು ವರ್ಷದ ಅವಧಿಯೊಳಗೆ ಮಾತ್ರ ರಿಪೀಟರ್ ಆಗಿ ಪ್ರವೇಶ ನೀಡಲು ಅವಕಾಶವಿರುತ್ತದೆ.** ರಿಪೀಟರ್ ಪ್ರವೇಶದ ಅನುಮೋದನೆಗೆ ಸಂಬಂಧಿಸಿದಂತೆ ಕಾರ್ಯದರ್ಶಿಯವರು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಗೆ ಪ್ರತ್ಯೇಕವಾಗಿ ನಿಗಧಿತ ಅವಧಿ ಒಳಗೆ ಪ್ರಸ್ತಾವನೆ ಸಲ್ಲಿಸುವುದು. |
| 3. | ಒಂದು ಸರ್ಕಾರಿ ಪಾಲಿಟೆಕ್ನಿಕ್‌ನಿಂದ ಮತ್ತೊಂದು ಸರ್ಕಾರಿ ಪಾಲಿಟೆಕ್ನಿಕ್‌ಗೆ ಅಥವಾ ಅನುದಾನಿತ ಪಾಲಿಟೆಕ್ನಿಕ್‌ಗೆ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ನಿಂದ ಸರ್ಕಾರಿ ಪಾಲಿಟೆಕ್ನಿಕ್‌ಗೆ ಅಥವಾ ಇನ್ನೊಂದು ಅನುದಾನಿತ ಪಾಲಿಟೆಕ್ನಿಕ್‌ಗೆ ವರ್ಗಾವಣೆ ಕೋರಿದ ತೃತೀಯ ಸೆಮಿಸ್ಟರ್ ಮತ್ತು ಐದನೇ ಸೆಮಿಸ್ಟರ್ ಡಿಪ್ಲೋಮಾ ಅಭ್ಯರ್ಥಿಗಳಿಗೆ ಪ್ರವೇಶ ನೀಡಲು ಅಂತಿಮ ದಿನಾಂಕ.<br>**ಟಿಪ್ಪಣಿ: ಖಾಸಗಿ ಪಾಲಿಟೆಕ್ನಿಕ್‌ಗಳ ವಿದ್ಯಾರ್ಥಿಗಳಿಗೆ ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳ ಅನುದಾನಿತ ಕೋರ್ಸುಗಳ ಸರ್ಕಾರಿ ಕೋಟಾ ಸೀಟುಗಳಿಗೆ ವರ್ಗಾವಣೆ ಮೇರೆಗೆ ಪ್ರವೇಶ ನೀಡಲು ಅವಕಾಶವಿರುವುದಿಲ್ಲ.** | ವಿದ್ಯಾರ್ಥಿಗಳ ವರ್ಗಾವಣೆಗೆ ಸಂಬಂಧಿಸಿದಂತೆ ದಿನಾಂಕ:**23–10–2020** ರ ಒಳಗೆ ಕೆಳಕಂಡ ದಾಖಲೆಗಳನ್ನು ಪಡೆದು ವರ್ಗಾವಣೆಯನ್ನು ಆಯಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರ ಹಂತದಲ್ಲೇ ಕೈಗೊಳ್ಳಬಹುದಾಗಿದೆ. ನಂತರ ನಿಗಧಿತ ಅವಧಿಯೊಳಗೆ ವರ್ಗಾವಣೆಗೊಂಡ ವಿದ್ಯಾರ್ಥಿಗಳ ಪಟ್ಟಿಯನ್ನು ಅನುಮೋದನೆಗಾಗಿ **ಕಾರ್ಯದರ್ಶಿಗಳು ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು** ಇವರಿಗೆ ಸಲ್ಲಿಸತಕ್ಕದ್ದು.<br>1) ಅಭ್ಯರ್ಥಿಯ ಮನವಿ<br>2) ಎರಡೂ ಪಾಲಿಟೆಕ್ನಿಕ್‌ಗಳ ನಿರಾಪೇಕ್ಷಣ ಪ್ರಮಾಣ ಪತ್ರ<br>3) ದಿನಾಂಕ: **23–10–2020** ರ ಒಳಗೆ<br>**ಲೆಕ್ಕಶೀರ್ಷಿಕೆ: 0202–02–101–0–04–Polytechnic** ಗೆ ಪಾವತಿ ಮಾಡಲಾದ ವರ್ಗಾವಣೆ ಶುಲ್ಕ ₹ 1,000/-ಕ್ಕೆ ಸಂಬಂಧಿಸಿದಂತೆ ರಸೀದಿ/ಚಲನ್ |

ಮೇಲೆ ನಮೂದಿಸಿರುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿ ವರ್ಗಾವಣೆ ಮೇರೆಗೆ ಪ್ರವೇಶ ನೀಡುವುದು. ನಿಯಮಗಳನ್ನು ಮೀರಿ ಮಾಡಿದ ಪ್ರವೇಶಗಳಿಗೆ ಸಂಬಂಧಿಸಿದ ಪ್ರಿನ್ಸಿಪಾಲರೇ ನೇರ ಜವಾಬ್ದಾರರಾಗುತ್ತಾರೆ.

**ವಿಶೇಷ ಸೂಚನೆ:**

1. 2019–20ನೇ ಸಾಲಿನಲ್ಲಿ **ಪ್ರಥಮ ಸೆಮಿಸ್ಟರ್ ಡಿಪ್ಲೋಮಾ** ವ್ಯಾಸಂಗಕ್ಕೆ ಮರುಪ್ರವೇಶ ಪಡೆಯುವ ವಿದ್ಯಾರ್ಥಿಗಳಿಂದ ಮಾತ್ರ ಸರ್ಕಾರದ ಪತ್ರ ಸಂ. ಇಡಿ 101 ಟಿಪಿಇ 2018, ದಿ:30–06–2018ರ ಪ್ರಕಾರ ಬೋಧನಾ ಶುಲ್ಕವನ್ನು ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ₹2,940/- (₹ 1,470/- + ₹ 1,470/-) ಮತ್ತು ಅನುದಾನಿತ ಪಾಲಿಟೆಕ್ನಿಕ್‌ಗಳಿಗೆ ₹5,618/- (₹ 2,809/- + ₹ 2,809/-) ರಂತೆ ಆಯಾ ಸೆಮಿಸ್ಟರ್‌ನ ಪ್ರಾರಂಭದಲ್ಲಿ (ಕ್ರಮವಾಗಿ ಜುಲೈ/ಆಗಸ್ಟ್ ಹಾಗೂ ನವೆಂಬರ್/ ಡಿಸೆಂಬರ್‌ನಲ್ಲಿ) ವಸೂಲಿ ಮಾಡತಕ್ಕದ್ದು. ಇತರೇ ಶುಲ್ಕ ಮತ್ತು ಅಭಿವೃದ್ಧಿ ಶುಲ್ಕ ₹ 1,330/-ನ್ನು ಒಟ್ಟಿಗೆ ಆಯಾ ವರ್ಷದ ಪ್ರಾರಂಭದಲ್ಲಿ ವಸೂಲಿ ಮಾಡುವುದು.

2. 2019–20ನೇ ಸಾಲಿನಲ್ಲಿ **ಮೂರನೇ ಸೆಮಿಸ್ಟರ್ ಡಿಪ್ಲೋಮಾ** ವ್ಯಾಸಂಗಕ್ಕೆ ಮರುಪ್ರವೇಶ ಪಡೆಯುವ ವಿದ್ಯಾರ್ಥಿಗಳಿಂದ ಮಾತ್ರ ಸರ್ಕಾರದ ಪತ್ರ ಸಂ. ಇಡಿ 101 ಟಿಪಿಇ 2018, ದಿ:30–06–2018ರ ಪ್ರಕಾರ ಬೋಧನಾ ಶುಲ್ಕವನ್ನು ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ₹2,940/- (₹ 1,470/- + ₹ 1,470/-) ಮತ್ತು ಅನುದಾನಿತ ಪಾಲಿಟೆಕ್ನಿಕ್‌ಗಳಿಗೆ ₹5,618/- (₹ 2,809/- + ₹ 2,809/-) ರಂತೆ ಆಯಾ ಸೆಮಿಸ್ಟರ್‌ನ ಪ್ರಾರಂಭದಲ್ಲಿ (ಕ್ರಮವಾಗಿ ಜುಲೈ/ಆಗಸ್ಟ್ ಹಾಗೂ ನವೆಂಬರ್/ ಡಿಸೆಂಬರ್‌ನಲ್ಲಿ) ವಸೂಲಿ ಮಾಡತಕ್ಕದ್ದು. ಇತರೇ ಶುಲ್ಕ ಮತ್ತು ಅಭಿವೃದ್ಧಿ ಶುಲ್ಕ ₹ 1,180/-ನ್ನು ಒಟ್ಟಿಗೆ ಆಯಾ ವರ್ಷದ ಪ್ರಾರಂಭದಲ್ಲಿ ವಸೂಲಿ ಮಾಡುವುದು.

3. 2019–20ನೇ ಸಾಲಿನಲ್ಲಿ **ಐದನೇ ಸೆಮಿಸ್ಟರ್ ಡಿಪ್ಲೋಮಾ** ವ್ಯಾಸಂಗಕ್ಕೆ ಮರುಪ್ರವೇಶ ಪಡೆಯುವ ವಿದ್ಯಾರ್ಥಿಗಳಿಂದ ಮಾತ್ರ ಸರ್ಕಾರದ ಆದೇಶ ಸಂ. ಇಡಿ 10 ಟಿಪಿಇ 2012, ದಿ:29–05–2012ರ ಪ್ರಕಾರ ಬೋಧನಾ ಶುಲ್ಕವನ್ನು ₹2,940/- (₹ 1,470/- + ₹ 1,470/-) ಮತ್ತು ಅನುದಾನಿತ ಪಾಲಿಟೆಕ್ನಿಕ್‌ಗಳಿಗೆ ₹5,618/- (₹ 2,809/- + ₹ 2,809/-) ರಂತೆ ಆಯಾ ಸೆಮಿಸ್ಟರ್‌ನ ಪ್ರಾರಂಭದಲ್ಲಿ (ಕ್ರಮವಾಗಿ ಜುಲೈ/ಆಗಸ್ಟ್ ಹಾಗೂ ನವೆಂಬರ್/ ಡಿಸೆಂಬರ್‌ನಲ್ಲಿ) ವಸೂಲಿ ಮಾಡತಕ್ಕದ್ದು. ಇತರೇ ಶುಲ್ಕ ಮತ್ತು ಅಭಿವೃದ್ಧಿ ಶುಲ್ಕ ₹ 1,180/-ನ್ನು ಒಟ್ಟಿಗೆ ಆಯಾ ವರ್ಷದ ಪ್ರಾರಂಭದಲ್ಲಿ ವಸೂಲಿ ಮಾಡುವುದು.

4. 03 ಮತ್ತು 05ನೇ ಸೆಮಿಸ್ಟರ್‌ಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ನಿಯಮಗಳ ಪ್ರಕಾರ ಅರ್ಹತೆ ಹೊಂದಿರುವುದನ್ನು ಖಚಿತಪಡಿಸಿಕೊಂಡು ಪ್ರವೇಶ ನೀಡತಕ್ಕದ್ದು. 01 ರಿಂದ 02ನೇ ಸೆಮಿಸ್ಟರ್ ಪರೀಕ್ಷೆಯಲ್ಲಿ 04 ವಿಷಯಗಳಿಗಿಂತ ಹೆಚ್ಚಿನ ವಿಷಯಗಳಲ್ಲಿ ಅನುತ್ತೀರ್ಣಗೊಂಡಿದಲ್ಲಿ ಮತ್ತು 01 ರಿಂದ 04ನೇ ಸೆಮಿಸ್ಟರ್ ಪರಿಕ್ಷೆಗಳಲ್ಲಿ 04 ವಿಷಯಗಳಿಗಿಂತ ಹೆಚ್ಚಿನ ವಿಷಯಗಳಲ್ಲಿ ಅನುತ್ತೀರ್ಣಗೊಂಡಿದಲ್ಲಿ ಅಂತಹ ವಿದ್ಯಾರ್ಥಿಗಳು 03 & 05ನೇ ಸೆಮಿಸ್ಟರ್ ಪ್ರವೇಶ ಪಡೆಯಲು ಅರ್ಹರಿರುವುದಿಲ್ಲ.

5. **ಕೋವಿಡ್–19 ಹಿನ್ನಲೆಯಲ್ಲಿ 2019–20ನೇ ಸಾಲಿನ 02 & 04 ನೇ ಸೆಮಿಸ್ಟರ್ ವಿದ್ಯಾರ್ಥಿಗಳನ್ನು ಮುಂದಿನ 03ನೇಯ ಮತ್ತು 05ನೇಯ ಸೆಮಿಸ್ಟರ್‌ಗಳಿಗೆ ತೇರ್ಗಡೆಗೊಳಿಸುವ ಸಂಬಂಧ, ಉಲ್ಲೇಖ(4)ರಲ್ಲಿ ರೂಪಿಸಿರುವ ಮಾನದಂಡಗಳನ್ನು ಅನುಸರಿಸಿ ಪ್ರಸಕ್ತ ಸಾಲಿಗೆ ಮಾತ್ರ ಅನ್ವಯವಾಗುವಂತೆ 03 ಮತ್ತು 05ನೇ ಸಮಿಸ್ಟರ್‌ಗಳಿಗೆ ಪ್ರವೇಶ ಪಡೆಯಲು ಕ್ರಮಜರುಗಿಸತಕ್ಕದ್ದು.**

6. ಅನುದಾನಿತ ಪಾಲಿಟೆಕ್ನಿಕ್‌ನ ಅನುದಾನ ರಹಿತ ಕೋರ್ಸಿನಿಂದ ಅನುದಾನಿತ ಕೋರ್ಸ್‌ಗೆ ವರ್ಗಾವಣೆ ಮಾಡಲು ಅವಕಾಶವಿರುವುದಿಲ್ಲ. ಆದರೆ ಸರ್ಕಾರಿ ಕೋರ್ಸಿನಿಂದ ಮತ್ತು ಅನುದಾನಿತ ಕೋರ್ಸ್‌ನಿಂದ ಅನುದಾನರಹಿತ ಕೋರ್ಸಿಗೆ ವರ್ಗಾವಣೆ ಪಡೆಯಬಹುದಾಗಿದೆ.

7. ವರ್ಗಾವಣೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಂದ ಪಡೆಯಬೇಕಾದ ಅರ್ಜಿ ನಮೂನೆ, ಹಿಂದಿನ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರು ನೀಡಬೇಕಾಗಿರುವ ನಿರಪೇಕ್ಷಣಾ ಪತ್ರದ ನಮೂನೆ ಹಾಗೂ ವರ್ಗಾವಣೆ ಮೇರೆಗೆ ಪ್ರವೇಶ ನೀಡುವ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರು ವಿದ್ಯಾರ್ಥಿಗೆ ನೀಡಬೇಕಾದ **ಅನುಮತಿ ಪತ್ರದ ನಮೂನೆಯನ್ನು ಲಗತ್ತಿಸಲಾಗಿದೆ.** ನಮೂನೆಯಲ್ಲಿ ಮಾಹಿತಿ ಪಡೆದು ವರ್ಗಾವಣೆ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ.

8. **ಸಂಖ್ಯಾಧಿಕ ಸೀಟುಗಳ (Supernumerary Seats) ಕೋಟಾದಡಿ (SNQ QUOTA) ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಯಾವುದೇ ಕೋರ್ಸು ಮತ್ತು ಪಾಲಿಟೆಕ್ನಿಕ್ ವರ್ಗಾವಣೆಗೆ ಅವಕಾಶವಿರುವುದಿಲ್ಲ.**

9. 02, 04, 06ನೇ ಸೆಮಿಸ್ಟರ್ ವರ್ಗಾವಣೆಗೆ ಅವಕಾಶವಿರುವುದಿಲ್ಲ.

10. ಕೋವಿಡ್–19 ಹಿನ್ನಲೆಯಲ್ಲಿ ಕರೋನಾ ಸಾಂಕ್ರಾಮಿಕ ಪಿಡುಗು ನಿಯಂತ್ರಣ ಮತ್ತು ಹರಡುವಿಕೆಯನ್ನು ತಡೆಗಟ್ಟುವಲ್ಲಿ ಅನುಸರಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಮೇಲೆ ನಮೂದಿಸಿರುವ ಮಾರ್ಗಸೂಚಿಗಳನ್ವಯ ನಿಗಧಿತ ಅವಧಿಯ ಒಳಗೆ ಪ್ರವೇಶ ಪ್ರಕ್ರಿಯೆಯನ್ನು ಆಯಾ ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರ ಹಂತದಲ್ಲೇ ಮುಗಿಸತಕ್ಕದ್ದು. ಅವಧಿ ಮೀರಿ ಕೋರಿಕೆಗಳನ್ನು ಪರಿಗಣಿಸಬಾರದೆಂದು ಹಾಗೂ ಈ ಸಂಬಂಧದಲ್ಲಿ ನಿರ್ದೇಶನಾಲಯಕ್ಕೂ ಪ್ರಸ್ತಾವನೆ ಸಲ್ಲಿಸಬಾರದೆಂದು ತಿಳಿಸಲಾಗಿದೆ. ಒಂದು ವೇಳೆ ನಿಗಧಿತ ಅವಧಿಯ ನಂತರ ಪ್ರವೇಶ ಸಂಬಂಧ ಪ್ರಿನ್ಸಿಪಾಲರ ಹಂತದಲ್ಲಿ ಪರಿಗಣಿಸಲಾಗದ ಕೋರಿಕೆಗಳನ್ನು ಇ–ಮೇಲ್ ವಿಳಾಸ **dteacm@hotmail.com** ಗೆ ಕಳುಹಿಸಲು ತಿಳಿಸಲಾಗಿದೆ.

**ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ.**

**ನಿರ್ದೇಶಕರು**

ಗೆ,

*ಎಲ್ಲಾ ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರಿಗೆ – ಸೂಕ್ತ ಮಾಹಿತಿ ಹಾಗೂ ಅನುಸರಣೆಗಾಗಿ.*

ಪ್ರತಿ ಇವರಿಗೆ ಮಾಹಿತಿಗಾಗಿ:

1. ಆಯುಕ್ತರವರ ಆಪ್ತಶಾಖೆಗೆ.
2. ನಿರ್ದೇಶಕರವರ ಆಪ್ತಶಾಖೆಗೆ.
3. ಕಾರ್ಯದರ್ಶಿಯವರ ಆಪ್ತಶಾಖೆಗೆ.
4. ಸಾರ್ವಜನಿಕ ಸಂಪರ್ಕಾಧಿಕಾರಿಯವರಿಗೆ.
5. ಇ–ಗವರ್ನೆನ್ಸ್ ವಿಭಾಗಕ್ಕೆ – ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
6. ಆರ್.ಡಿ.ಎಂ ವಿಭಾಗಗಳಿಗೆ.
7. ಇಆರ್‌ಎಸ್(3) ವಿಭಾಗಕ್ಕೆ. 8.ಕಛೇರಿ ಪ್ರತಿ.

**ಕರ್ನಾಟಕ ಸರ್ಕಾರ**

ತಾಂತ್ರಿಕ ಶಿಕ್ಷಣ ಇಲಾಖೆ

ಪಾಲಿಟೆಕ್ನಿಕ್ ಬದಲಾವಣೆಗಾಗಿ ಅರ್ಜಿ

(ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್‌ಗೆ ಸಂಬಂಧಿಸಿದಂತೆ)

(ನಮೂನೆ-1)

(ವಿದ್ಯಾರ್ಥಿ ಭರ್ತಿ ಮಾಡಬೇಕಾದುದು)

1. ವಿದ್ಯಾರ್ಥಿಯ ಹೆಸರು ಮತ್ತು ಪೂರ್ಣ ವಿಳಾಸ ______________________________
2. ವಿದ್ಯಾರ್ಥಿಯ ತಂದೆಯ ಹೆಸರು ______________________________
3. ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ತರಗತಿ/ಕೋರ್ಸ ಮತು ಪಾಲಿಟೆಕ್ನಿಕ್ ಹೆಸರು ______________________________
4. ಅಭ್ಯರ್ಥಿಯು ಯಾವ ಪಾಲಿಟೆಕ್ನಿಕ್ ಮತ್ತು ತರಗತಿ ಹಾಗೂ ಕೋರ್ಸ್‌ಗೆ ವರ್ಗಾವಣೆ ಕೋರಲಾಗಿದೆ ______________________________
5. ಹಿಂದಿನ ಡಿಪ್ಲೋಮಾ ತರಗತಿಯಲ್ಲಿ ವ್ಯಾಸಂಗ ಮಾಡಿದ ವರ್ಷ ಮತ್ತು ನೋಂದಣಿ ಸಂಖ್ಯೆ ______________________________
6. ಪಾಲಿಟೆಕ್ನಿಕ್ ವರ್ಗಾವಣೆಗೆ ಸಂಬಂಧಿಸಿದಂತೆ ಕಾರಣಗಳನ್ನು ಸ್ಪಷ್ಟವಾಗಿ ನಮೂದಿಸುವುದು______________________________

**ಲಗತ್ತಿಸಬೇಕಾದ ಅಡಕಗಳು**

(1) ಹಿಂದಿನ ತರಗತಿಯ ಅಂಕಪಟ್ಟಿ : ಅಂಕಪಟ್ಟಿಗಳು

(2) ದಿನಾಂಕ: 23-10-2020 ರ ಒಳಗೆ **0202-02-101-0-04-Polytechnic** ಲೆಕ್ಕಶೀರ್ಷಿಕೆಗೆ ವರ್ಗಾವಣೆ ಶುಲ್ಕ ₹ 1,000/- ನ್ನು ಪಾವತಿಸಿರುವ ಬಗ್ಗೆ ಚಲನ್ ಅಥವ ರಸೀದಿ (ಸರ್ಕಾರಿ ಖಜಾನೆ ಅಥವ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಜಮಾ ಮಾಡಿರಬೇಕು)

(3) ಎರಡೂ ಪಾಲಿಟೆಕ್ನಿಕ್‌ಗಳ ಎನ್.ಓ.ಸಿ.

---

ತಂದೆ/ಪೋಷಕರ ಸಹಿ

ವಿದ್ಯಾರ್ಥಿಯ ಸಹಿ

(ನಮೂನೆ-2)

**<u>ಅಭ್ಯರ್ಥಿಯು ವ್ಯಾಸಂಗ ಮಾಡುತ್ತಿರುವ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರ ಶಿಫಾರಸ್ಸು</u>**

ಸಂಖ್ಯೆ: ____________________ ದಿನಾಂಕ: ____________

ಪಾಲಿಟೆಕ್ನಿಕ್‌ನ ಕೋಡ್ ಸಂಖ್ಯೆ: ____________

ವಿದ್ಯಾರ್ಥಿಯು ಒದಗಿಸಿದ ಮಾಹಿತಿಯನ್ನು ಖುದ್ದು ಪರಿಶೀಲಿಸಲಾಗಿದೆ. ಮೇಲ್ಕಂಡ ವಿದ್ಯಾರ್ಥಿಯು ಈ ಪಾಲಿಟೆಕ್ನಿಕ್‌ನಲ್ಲಿ ತೃತೀಯ / ಅಂತಿಮ ಸೆಮಿಸ್ಟರ್ ಡಿಪ್ಲೋಮಾ ತರಗತಿಗೆ ನಿಗಧಿತ ಅವಧಿಯೊಳಗೆ ಪ್ರವೇಶ ಪಡೆದಿದ್ದು, ಪ್ರಸ್ತುತ ಬೇರೊಂದು ಪಾಲಿಟೆಕ್ನಿಕ್‌ನಲ್ಲಿ ವ್ಯಾಸಂಗ ಮುಂದುವರೆಸಲು ಕೋರಿರುವುದನ್ನು ವಿದ್ಯಾರ್ಥಿಯು ಶೈಕ್ಷಣಿಕ ಹಿತದೃಷ್ಟಿಯಿಂದ ಪರಿಗಣಿಸಿ ವಿದ್ಯಾರ್ಥಿಯ ವರ್ಗಾವಣೆಗೆ ಈ ಪಾಲಿಟೆಕ್ನಿಕ್‌ನ ಯಾವುದೇ ಅಭ್ಯಂತರ ಇರುವುದಿಲ್ಲ ಎಂದು ಮತ್ತು ನಿಯಮಗಳ ಪ್ರಕಾರ ವಿದ್ಯಾರ್ಥಿಯು ವರ್ಗಾವಣೆಗೆ ಅರ್ಹರಿರುವರೆಂದು ಧೃಡೀಕರಿಸಲಾಗಿದೆ ಹಾಗೂ ಅಭ್ಯರ್ಥಿಯ ಕೋರಿಕೆಯಂತೆ ಪಾಲಿಟೆಕ್ನಿಕ್ ಬದಲಾವಣೆಗೆ ಶಿಫಾರಸ್ಸು ಮಾಡಲಾಗಿದೆ. ವ್ಯಾಸಂಗದ ಅವಧಿಯಲ್ಲಿ ಅಭ್ಯರ್ಥಿಯ ಗುಣ ಮತ್ತು ನಡತೆಯು ಸಮರ್ಪಕವಾಗಿತ್ತು ಎಂದು ಧೃಡೀಕರಿಸಲಾಗಿದೆ ಹಾಗೂ **ಸದರಿ ವಿದ್ಯಾರ್ಥಿಯು SNQ ಕೋಟಾದಡಿ ಪ್ರವೇಶ ಪಡೆದಿರುವುದಿಲ್ಲವೆಂದು ಧೃಡೀಕರಿಸಲಾಗಿದೆ**. ವಿವರವನ್ನು ಕೆಳಗೆ ನಮೂದಿಸಲಾಗಿದೆ.

1) ಅಭ್ಯರ್ಥಿಯ ಹೆಸರು: ____________________
2) ಪ್ರವೇಶ ಪಡೆದ ವರ್ಷ/ತರಗತಿ/ಕೋರ್ಸ್/ನೋದಣಿ ಸಂಖ್ಯೆ: ____________________
3) ನಿರ್ದೇಶನಾಲಯದಿಂದ ಪ್ರವೇಶಾನುಮೋದನೆ ಪಡೆದಿರುವ ಬಗ್ಗೆ ದಾಖಲೆಯ ಸಂಖ್ಯೆ ____________

ಪ್ರಿನ್ಸಿಪಾಲರ ಸಹಿ ಮತ್ತು ಮೊಹರು

ಸ್ಥಳ :
ದಿನಾಂಕ :

**<u>ವರ್ಗಾವಣೆ ಮೇರೆಗೆ ಪ್ರವೇಶ ಮಾಡಿಕೊಳ್ಳುವ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರ ಶಿಫಾರಸ್ಸು</u>**

ಸಂಖ್ಯೆ: ____________________ ದಿನಾಂಕ: ____________

ಪಾಲಿಟೆಕ್ನಿಕ್‌ನ ಕೋಡ್ ಸಂಖ್ಯೆ: ____________

ಅಭ್ಯರ್ಥಿಯ ಮೇಲ್ಕಂಡ ದಾಖಲೆಗಳನ್ನು ಪರಿಶೀಲಿಸಲಾಗಿದೆ. ವಿದ್ಯಾರ್ಥಿಯು ತೆಗೆದುಕೊಳ್ಳಲು ಬಯಸಿದ ಕೋರ್ಸ್ ಈ ಪಾಲಿಟೆಕ್ನಿಕ್‌ನಲ್ಲಿ ಭೋದಿಸಲಾಗುತ್ತಿದ್ದು, ಪ್ರಸ್ತುತ ಈ ಕೋರ್ಸ್‌ನ ತೃತೀಯ / ಅಂತಿಮ ಸೆಮಿಸ್ಟರ್ ಡಿಪ್ಲೋಮಾದಲ್ಲಿ **<u>ಇಂಟೇಕ್ ಮಿತಿಯೊಳಗೆ ಸ್ಥಾನ ಖಾಲಿ ಇರುವುದನ್ನು ಗಣನೆಗೆ ತೆಗದುಕೊಂಡು</u>** ಮೇಲ್ಕಂಡ ಅಭ್ಯರ್ಥಿಗೆ ಕೆಳಕಂಡಂತೆ ವರ್ಗಾವಣೆ ಮೇರೆಗೆ ದಿನಾಂಕ: ____________ ರಂದು ಪ್ರವೇಶ ನೀಡಲಾಗಿದೆ.

1) ಅಭ್ಯರ್ಥಿಯ ಹೆಸರು: ____________________
2) ವರ್ಗಾವಣೆ ಮೇರೆಗೆ ಪ್ರವೇಶ ನೀಡಿರುವ ತರಗತಿ ಹಾಗೂ ಕೋರ್ಸ್/ನೋದಣಿ ಸಂಖ್ಯೆ: ____________
____________________________________________

ಪ್ರಿನ್ಸಿಪಾಲರ ಸಹಿ ಮತ್ತು ಮೊಹರು

ಸ್ಥಳ :
ದಿನಾಂಕ :

**<u>ಪ್ರತಿ:-</u>**
ಪ್ರಿನ್ಸಿಪಾಲರು,
____________
____________
____________